ಹೊರಗೆ ಹಾಸಿ ಬೀಸಿ ಹೊಯ್ಯುತ್ತಿರುವ ಆಶ್ಲೇಷಾ ಮಳೆಯ ಅಬ್ಬರ! ಒಳಗೆ ಮಬ್ಬುಗತ್ತಲಲ್ಲಿರುವ ಜನರ ಮುಖ ಮಾತ್ರವಲ್ಲದೆ ಬುದ್ಧಿಗೂ ಮೋಡಗಟ್ಟಿದ ಮೌನ. ಅವರೆಲ್ಲರ ಮಧ್ಯೆ ಈ ಲೋಕದ ಹಂಗು ಹರಿದುಕೊಂಡು ಮಲಗಿದ ಪ್ರಭಾವತಿ. ಅವಳನ್ನೇನು ಮಾಡುವುದು? ಎಂಬುದೇ ಈಗ ಬಂದಿರುವ ಬಹು ದೊಡ್ಡ ಸಮಸ್ಯೆ. ಉಸಿರು ನಿಂತ ದೇಹವನ್ನೊಯ್ದು ಸುಟ್ಟು ಹಾಕಲೇ ಬೇಕು, ಸರಿ. ಆದರೆ ಇಷ್ಟು ವರ್ಷ ತನ್ನ ತಂಗಿಯಾಗಿ ಮಾತ್ರವಲ್ಲ, ಸಾವಿರಾರು ಮಕ್ಕಳಿಗೆ ವಿದ್ಯಾದಾನ ಮಾಡಿದ ಗುರುವಾಗಿಯೂ ಘನತೆ ಗೌರವದಿಂದ ಬಾಳಿ ಬದುಕಿದ ಅವಳನ್ನು ಯಾವುದೋ ಪರದೇಸಿ ಹೆಣದಂತೆ ಸಂಸ್ಕಾರವಿಲ್ಲದೆ ಸುಟ್ಟು ಹಾಕುವದೆ? ಎಂಬ ಸೀತಣ್ಣನ ಪ್ರಶ್ನೆಗೆ ಮೌನವೇ ಉತ್ತರವಾಗಿ ಕುಳಿತ ಪಾಚ ಭಟ್ಟರು.

ಹೇಳುವಷ್ಟು ಹೇಳಿಯಾಗಿದೆ. ಶಾಸ್ತ್ರದಲ್ಲಿದ್ದಿದ್ದೇ ಹಾಗೆ. ಮದುವೆಯೇ ಹೆಂಗಸಿಗೆ ಸಕಲ ಸಂಸ್ಕಾರದ ಮೂಲ. ಮದವೆಯಾಗದ ಹೆಂಗಸಿಗೆ ಯಾವುದೇ ಮಂತ್ರಪೂರ್ವಕ ಸಂಸ್ಕಾರವೂ ಸಾಧ್ಯವಿಲ್ಲ. ಮದುವೆಯಿಂದಲೇ ಅವಳು ಕುಲಸ್ತ್ರೀಯಾಗುವದು. ಮಾತೆಯಾಗಿ ವಂಶೋದ್ಧಾರಕಿಯಾಗಿಯೇ ಅವಳು ಸದ್ಗತಿ ಹೊಂದುವದು. ಮನುಸ್ಮೃತಿಯಲ್ಲೇ ಬರೆದಿದೆಯಲ್ಲ ಅವಳಿಗೆ ಶೋಡಷ ಸಂಸ್ಕಾರಗಳನ್ನು ಅಮಂತ್ರಕವಾಗಿ ಅವರವರ ಕುಲಾಚಾರದಂತೆ ಮಾಡಬಹುದೆಂದು. ಇದಕೂ ಮಿಕ್ಕು ನಾನೇನು ಮಾಡಲಿ? ಎಂಬ ಉದಾಸೀನದಿಂದ ಸುತ್ತ ಕುಂತವರ ಮುಖವನ್ನೇ ನೋಡುತ್ತಿದ್ದಾರೆ. ಊರವರು, ನೆಂಟರಿಷ್ಟರು ಸೀತಣ್ಣನ ಹೆಂಡತಿ ಮಕ್ಕಳು, ಮನೆ ಮಂದಿ ಮಾತ್ರವಲ್ಲದೆ ಶಾಲೆಯ ಹೆಡ್ಮಾಸ್ತರು, ಸಿರಬಳೆ ಕಂಡಿಯಲ್ಲಿ ಇಣುಕುತ್ತಿರುವ ಹತ್ತಿಪ್ಪತ್ತು ಮಕ್ಕಳು. ಎಲ್ಲರೂ ಮುಂದೇನು, ಮುಂದೇನು ಎಂದು ಕಾಯುತ್ತಿದ್ದಾರೆ.

'ಹಂಗಾರೆ ಯನ್ನ ತಂಗಿ ಕ್ರಿಯಾ ಹಿಡಿಯಲೆ ಆಗ್ತಿಲ್ಲೆ ಹೇಳ್ಯಾತಲಿ. ಇರ್ಲಿ, ಗೋಕರ್ಣಕ್ಕೋಗಿಯಾದ್ರೂ ನೋಡ್ತಿ ಅಲ್ಲೆಂತಾದ್ರೂ ಮಾಡಲಾಗ್ತ ಹೇಳಿ. ಈಗಿಲ್ಲಿ ಅದೆಷ್ಟ್ ಹೊತ್ತು ಕುಂತ್ಗಂಡ್ರೂ ಅಷ್ಟೆಯ. ನಡಿರಿ, ಈಗ ಮುಂದಿನ ಕೆಲ್ಸ ನೋಡ್ವಾ' ಒಂದುಬ್ಬೆ ವಾದ ವಿವಾದ ಮುಗಿಸಿ ಕುಳಿತ ಸೀತಣ್ಣ ಧಡಕ್ಕನೆ ಮೇಲೆದ್ದ. 'ಹಂಗಲ್ದೊ ಮಾರಾಯ, ಇದ್ರಲ್ಲಿ ಯಂದೆಂತ ತಪ್ಪಿದ್ದೊ? ಹಿರೀಕ್ರು ಬರದಿಟ್ಟಂಗೆ ನಾವೆಲ್ಲ ನಡಕಂಬ್ದಲ್ಲದನೊ? ಆ ಋಷಿ ವಾಕ್ಯ ಮೀರಿ ನಡಿಯಲೆ ಆಂ ಯಾರು, ನೀ ಯಾರು?'

'ಇಲ್ಲಿರೋ ಹೆಂಗಸ್ರು ಗಂಡಸ್ರು ನಾವೆಲ್ರೂ ಮನುಷರೆಯ ಹೇಳದಷ್ಟು ಗೊತ್ತಿದ್ದು ಭಟ್ರೆ. ಮತ್ತೆ ಆ ನಿಮ್ಮ ಋಷಿವಾಕ್ಯ ಎಲ್ಲ ಬರೀ ಗಂಡಸರ ಪಕ್ಷಪಾತಿ ಹೇಳದೂ ಗೊತ್ತಿದ್ದು. ಆನೂ ಮನುಸ್ಮೃತಿ ಓದಿದವ್ನೇಯ. ಹೋಗ್ಲಿ, ಈಗ ಇದನ್ನು ತಗಂಡ್ಹೋಗಿ ಸುಮ್ನೆ ಸುಟ್ಟು ಹಾಕಕ್ಕೆ ಬರವು ಹೌದ ಅಲ್ದ?....ನಡಿರೊ, ನೀರು ತಗಂಬರ್ರೊ....ಆದ್ರೂ ಭಟ್ರೆ, ಸಂಸ್ಕಾರಿಲ್ದೆ ಸುಟ್ರೆ ಸತ್ತವಕೆ ಸದ್ಗತಿ ಇಲ್ಲೆ, ಅವು ಪ್ರೇತಾಗಿ ಕಾಡ್ತ, ಹೇಳವೂ ನಿಂಗ್ಳೇಯ, ನಂತ್ರ ಪ್ರೇತೋದ್ಧಾರ ಮಾಡ್ಸವೂ ನಿಂಗಳೇಯ. ಈಗ ಹೀಂಗ್ ಹೇಳವೂ ನಿಂಗ್ಳೆಯ. ಇದ್ರಲ್ಲಿ ಖರೆ ಯಾವ್ದು? ಯಂಗ್ಳಂತವು ಯಾವ್ದನ್ನು ನಂಬವು?'

'ಯಾವ್ದನ್ನು ಬೇಕಾದ್ರೂ ನಂಬದಾದ್ರೆ ನಂಬಿ, ಬಿಡದಾದ್ರೆ ಬಿಡಿ. ನಮ್ಮ ಹಿರೀಕರು ಬರದಿಟ್ಟ ಶಾಸ್ತ್ರ ಆಂ ಹೇಳಿದ್ದಿ. ಅದರ್ಹಾಂಗೆ ನೆಡಕಂಬ್ದು ಯನ್ನ ಕರ್ತವ್ಯ. ಅಷ್ಟೆಯ. ಇನ್ನು ನಿಂಗ ನಿಂಗಳ ಮರ್ಜಿಯಂತೆ ಮಾಡಲಡ್ಡಿಲ್ಲೆ. ಆನಿನ್ನು ಬರ್ತೆ ಹಂಗರೆ' ಭಟ್ಟರು ಹೆಗಲ ಶಾಲು ಕೊಡವುತ್ತ ಮೇಲೆದ್ದರು.

ಮೂರು ಜನ ಅಣ್ಣ ತಮ್ಮಂದಿರ ಮಧ್ಯದಲ್ಲಿ ಇದ್ದಿದ್ದೊಂದು ತಂಗಿಯಾಗಿತ್ತು. ಖರೆವಾಗ್ಲೂ ಒಂದೇ ನೂರು, ನೂರೇ ಒಂದು ಅಂಬ್ಹಂಗೆ ಬದುಕಿಕೊಂಡಿತ್ತು. ಒಬ್ಬರಿಂದ ಒಂದು ಮಾತು ಹೇಳಿಸಿಕೊಳ್ಳದೆ ತಾನೇನೊ, ತನ್ನ ಕೆಲಸೇನೊ ನೋಡ್ಕೊಂಡು ಇರ್ತಿತ್ತು. ಶಾಲೆ ಮಕ್ಕಗೆಲ್ಲ ಪ್ರಭಕ್ಕೋರು ಅಂದ್ಬಿಟ್ರೆ ಆಗಿತ್ತು. ಮನ್ಯಲ್ಲೂ ಅಷ್ಟೆ, ಬೆಳಿಗ್ಗೆ ಬೇಗೆದ್ದು ಬಾಗಿಲು ತೆಗೆಯದೇ ಅವಳಾಗಿತ್ತು. ಇಡೀ ಮನೆಯೆಲ್ಲ ಗುಡಿಸಿ ಒರೆಸಿ, ಮಧ್ಯಾನ್ಹದ ಅಡಿಗೆಗೆ ತರಕಾರಿ ಕೊಚ್ಚಿಟ್ಟು, ಚಟ್ನಿ ಮಾಡಿ ದೋಸೆ ಬಂಡಿ ಇಟ್ಟಕ್ಕೇ ಮೀಯಲ್ಹೋಗ್ತಿತ್ತು. ಸಂಜೆ ಶಾಲೆಯಿಂದ ಬರುವಾಗ್ಲೇ ಸೆರಗು ಸೊಂಟಕ್ಕೆ ಸಿಕ್ಕಿಸಿಕೊಂಡಿರ್ತಿತ್ತು. ಹಾಂಗಾಗಿ ಅತ್ತಿಗೆ ನಾದ್ನಿಯರಿಗೂ ಅವರ ಮಕ್ಳಿಗೂ ಕೈ ಮುದ್ದಾಗಿತ್ತು. ಆದ್ರೆಂತಾ ಮಾಡೋದು, ಯಾರೆಷ್ಟು ಹೇಳಿದ್ರೂ ಮದುವೆಯಾಗ್ಲಿಕ್ಕೆ ಮಾತ್ರ ಒಪ್ಪಿರ್ಲೇ ಇಲ್ಲ. ಅಪ್ಪ ಅಮ್ಮ, ಅಣ್ಣ ತಮ್ಮಂದಿರು, ನೆಂಟರಿಷ್ಟರು, ಅವಳ ಗೆಳತೇರು, ಎಲ್ಲಾರ ಕೈಲೂ ಅಫ್ಳಿದ್ದೊಂದೇ ಹಟ, ತನಗೆ ಮದುವೆ ಬ್ಯಾಡ, ತನ್ನ ಕಾಲ್ಮೇಲೆ ತಾಂ ನಿಂತ್ಗತ್ತಿ. ಯಾರಿಗೂ ಹೊರೆಯಾಗಿರ್ತ್ನಿಲ್ಲೆ. ಹೇಳುವಷ್ಟು ಹೇಳಿ, ಬೈದು, ಊಟ ಬಿಟ್ಟು ಅಬ್ಬೆ ಹೆದರಿಸಿದ್ರೂ ಬಗ್ಗದಿದ್ದಾಗ ಅವಳ ಪಾಡಿಗವ್ಳ ಬಿಟ್ಟುಬಿಟ್ಟಿದ್ರು. ವರ್ಷ ಮರುವರ್ಷದಲ್ಲಿ ಅಪ್ಪ ಅಮ್ಮ ಇಬ್ರೂ ಹೋಗಿ ಬಿಟ್ಟಾಗ ದರೆ ಹೊಡಸಲಲ್ಲಿ ಒಬ್ಬಳೇ ಕೂತು ಅತ್ತು ಬರ್ತಿದ್ಲು. ಇಂಥ ತಂಗಿ ಎರಡು ದಿನ ಜ್ವರ ಬಂದು ಮಲಗಿದವ್ಳು ಮೂರನೇ ಬೆಳಗು ಕಾಣ್ಲಿಲ್ಲ, ಅಂದ್ರೆ?....ಹಾಂಗೆ ಇನ್ನೂ ಎರಡ್ವರ್ಷ ಸರ್ವೀಸಿತ್ತು. ಪ್ರಭಕ್ಕೋರಿಂದ್ಲೇ ಗಾಳಿಕೊಡ್ಲ ಶಾಲೆ ನಡಿಯದು ಎಂದು ಕುಶಾಲಿಗೆ ಕುಶಾಲು, ಬದ್ಧಕ್ಕೆ ಬದ್ಧ ಜನ ಮಾತಾಡತಿದ್ರು.

ಸ್ವರಿ, ಅವ್ಳು ಪಡಕೊಂಡು ಬಂದಿದ್ದೇ ಅಷ್ಟಾದ್ರೆ ಯಾರೆಂತ ಮಾಡ್ಲಿಕ್ಕಾಗ್ತದೆ? ಸುಟ್ಟ ಕೂಸಿನ ಬದುಕಂದ್ರೆ ಆಯುಷ್ಯೆಲ್ಲಾ ಪರರ ಗುರುಸಾಗಿ ದುಡಿಯದೇ ಅಗಿ ಹೋತು. ತನ್ನದು ಅನ್ನೋ ಒಂದು ಕಣ ಕುಸುಮ ಕಾಣಲಿಲ್ಲ. ಸಾಯೊ ಕಡೆಕಾಲಕ್ಕೂ ಒಬ್ರಿಂದ ಒಂದು ಕುಡ್ತೆ ನೀರು ಹೊಯ್ಸಿಕೊಳ್ಳದೆ ಸತ್ತು ಪುಣ್ಯಾತ್ಗಿತ್ತಿಯಾತು. ಆದ್ರೆ ಧರ್ಮ ಶಾಸ್ತ್ರದಲ್ಲೂ ಸೈತ ಇಂಥಾ ಪಕ್ಷಪಾತವ? ಮದುವೆಯಾದ ಹೆಂಗ್ಸಿಗೊಂದು, ಆಗದಿದ್ದವ್ಳಿಗೊಂದು ನೇಮವ? ಅದ್ರಲ್ಲೂ ಮುಖ್ಯವಾಗಿ ಶವ ಸಂಸ್ಕಾರದಲ್ಲೂ ತಾರತಮ್ಯ ಅಂದ್ರೆ ಇದ್ಯಾವ ನ್ಯಾಯ?...ಸೀತಣ್ಣನಿಗೆ ಮಾತ್ರವಲ್ಲದೆ ಮತ್ತೂ ಕೆಲವು ಗಂಡಸರು, ಹೆಂಗಸರಲ್ಲೂ ಪ್ರಶ್ನೆ ಮೂಡಿದ್ದು ಸುಳ್ಳಲ್ಲ. ಹಾಗೆಂದು ಬಾಯಿಗೆ ಬಂದಿದ್ದೆಲ್ಲ ಒದರಲಿಕ್ಕುಂಟೆ? ಹೊತ್ತು ಗೊತ್ತು ನೋಡಬೇಕಲ್ಲ? ಎಂದು ಸುಮ್ಮನೆ ಕುಳಿತ್ತಿದ್ದರಷ್ಟೆ. ಇದೀಗ ಅವನೆ ಮುಂದಿನ ಕೆಲಸಕ್ಕೆದ್ದಾಗ ನಮ್ಮದೇನು ಪುನಶ್ಲೋಕ ಎಂದು ಗಡಬಡನೆ ಮೇಲೆದ್ದು ಕೆಲವರು ಅಂಗಳಕ್ಕೆ, ಕೆಲವರು ನೀರು ತರಲಿಕ್ಕೆ, ಮತ್ತೂ ಕೆಲವರು ಹೊಸ ವಸ್ತ್ರ, ಹೊಸ ಗಡಿಗೆ ಎಂದೆಲ್ಲ ಓಡ್ಯಾಡತೊಡಗಿದರು.

ಹಾಗೆ ನೆರೆದ ಜನರೆಲ್ಲ ಸೇರಿ ಅಮಂತ್ರಕವಾಗಿಯೇ ಪ್ರಭಾವತಿಯ ದೇಹಕ್ಕೆ ನೀರು ಹೊಯ್ದು, ಚಟ್ಟ ಕಟ್ಟಿ, ಹೊತ್ತುಕೊಂಡು ಹೋಗಿ ಸುಡುತ್ತಿರುವಾಗ ಶಾಲೆ ಮಕ್ಕಳೂ ಹಿಂಬಾಲಿಸಿದ್ದರು. ನೀವೆಲ್ಲ ಮನಿಗ್ಹೋಗಿ, ನಡಿರಿ, ನಡಿರಿ ಎಂದು ಎಷ್ಟೇ ಹುಚುಗುಟ್ಟಿದರೂ ನಾಲ್ಕನೆಯತ್ತೆಯ ಗೀತಿ, ಐದನೆ ಕ್ಲಾಸಿನ ಸುಮಿ, ಮೂರನೆಯತ್ತೆಯ ಪ್ರಸಾದ ಮಾಣಿ, ಸೆಳ್ಳೆ ಮರದ ಹಿಂದೆ ಅಡಗಿಕೊಂಡು ಅಳುತ್ತ ನಿಂತಿದ್ದರು. ಗೀತಿಯಂತೂ ಅಯ್ಯೋ! ನಮ್ಮಕ್ಕೋರಿಗೆ ಬೆಂಕಿ ಹಾಕ್ಬೇಡಿ. ನಮ್ಮಕ್ಕೋರನ್ನು ಸುಟ್ಟು ಹಾಕ್ಬೇಡಿ, ಅಯ್ಯೊ, ನಮ್ಮಕ್ಕೋರು ನಮಗ್ಬೇಕು, ಎಂದು ಒದರುತ್ತ, ತಕಪಕ ಕುಣಿಯುತ್ತ, ಬೆಂಕಿಯ ಹತ್ತಿರವೇ ಬಂದುಬಿಟ್ಟಾಗ ಮೇಲಿನ ಮನೆ ಮಾದಣ್ಣ ಅವಳನ್ನೆತ್ತಿಕೊಂಡುಹೋಗಿ ಮನೆಗೆ ಬಿಟ್ಟು ಬಂದ. ಆ ಗಲಾಟೆ ಕಂಡು ಸುಮಿ ಪ್ರಸಾದರೂ ಓಟ ಕಿತ್ತರು.

ತಂಗಿಯನ್ನು ಸುಟ್ಟು ಮನೆಗೆ ಬಂದರೆ ಅವಳಿಲ್ಲದ ಮನೆ ರಾವು ಹೊಡೆಯುತ್ತಿತ್ತು. ಅವಳಿಗೆ ಜ್ವರ ಬಂದ ಮರು ದಿನವೇ ಕುಪ್ಪಾ ಡಾಕ್ಟರ ಔಷಧಿ ತಂದಾಗಿತ್ತು. ಬರಿ ಥಂಡಿ ಜ್ವರ ಅಷ್ಟೆಯ, ನಾಳೆ ಅಂಬಷ್ಟ್ರಲ್ಲಿ ಕಡಿಮೆಯಾಗ್ತೆ, ಅಂದಿದ್ದರು. ಆದರೆ ಬೆಳಗಾಗೆದ್ದು ನೋಡುವಾಗ ಅವಳೆ ಕಡಿಮೆಯಾಗಿಬಿಟ್ಟಿದ್ದಳು. ಈ ಆಘಾತವನ್ನು ಜೀರ್ಣಿಸಿಕೊಳ್ಳುವದು ಮನೆ ಮಂದಿಗೆ ಸುಲಭವಾಗಿರಲಿಲ್ಲ. ಕುಂತಲ್ಲಿ ನಿಂತಲ್ಲಿ ಅವಳ ಮುಖ, ಮಾತು, ಸರ ಬರ ಸೀರೆ ಸದ್ದು, ಅವಳು ಮಾಡುತ್ತಿದ್ದ ಚಟ್ನಿಯ ರುಚಿ ಹೀಗೆ ಎಲ್ಲ ಎಲ್ಲ ನೆನಪುಗಳೂ ಬಿಟ್ಟೂ ಬಿಡದೆ ಕಾಡುತ್ತಿದ್ದವು. ನಿಜ, ಅಪ್ಪ ಅಮ್ಮ ಇಲ್ಲದ, ಮಕ್ಕಳು ಮರಿ ಕಾಣದ ಅವಳಿಗಾಗಿ ಗೋಳಾಡಿ ಬಿದ್ದು ಬಿದ್ದು ಅಳುವವರಾರೂ ಇರಲಿಲ್ಲ. ಅವಳು ಇನ್ನಿಲ್ಲವೆಂಬ ಸಂಕಟ ಕೊರತೆ ಯಾರಿಗೂ ಅಷ್ಟಾಗಿ ಕಾಡಬೇಕಿರಲಿಲ್ಲ. ಈ ದುಃಖವೇನಿದ್ದರೂ ತಾತ್ಕಾಲಿಕವಾಗಿತ್ತು. ಅವಳು ಮಾತ್ರವಲ್ಲ, ಯಾರಿಲ್ಲದಿದ್ದರೂ ಜಗತ್ತು ಯಥಾ ಪ್ರಕಾರ ಮುಂದುವರಿಯಲೇಬೇಕಾದ ಕಟು ಸತ್ಯವಿರುವಾಗ ಯಾವ ಸಂಕಟವೂ ಶಾಶ್ವತವಾಗಿರಲಿಲ್ಲ. ಎಲ್ಲ ಸರಿ, ಆದರೆ ಇಷ್ಟು ಬೇಗ? ಹೀಗೆ?

ಪ್ರಶ್ನೆ ನೂರಾರು, ಉತ್ತರ ಮಾತ್ರ ದೇವರಿಗೇ ಗೊತ್ತು, ಅಂದರೆ ಪೂರ್ತಿ ಸತ್ಯವಲ್ಲ. ಅವಳ ಸಣ್ಣತ್ತಿಗೆಗೆ ಅಷ್ಟಿಷ್ಟು ಹೊಳಹು ಗೊತ್ತಿದೆ. ಪಬ್ಬತ್ತಿಗೆಯ ಅಂತರಂಗವನ್ನು ಅವಳು ಕೆಲ ಮಟ್ಟಿಗೆ ಅರಿತಿದ್ದಾಳೆ. ಶಾಲೆಗೆ ರಜೆ ಇದ್ದಾಗ ಮಗೆ ಓಳಿಗೆ ನೀರು ಹೊಯ್ಯೊ ನೆವದಲ್ಲಿ ಗದ್ದೆಗೆ ಹೋದರೆ ಅಥವಾ ಮಳೆಗಾಲದಲ್ಲಿ ಉಪ್ಪಾಗೆ ಬೀಜ ಹೆಕ್ಕಲು ಹೋದರೆ ಅಲ್ಲಿ ಅತ್ತಿಗೆ ಅತ್ತಿಗೆ ಮಾತಾಡದ ಸುದ್ದಿಯೇ ಇಲ್ಲ. ಆ ನಡುವೆ ಪಬ್ಬಿಯ ಜೀವದ ಗೆಳತಿ ಗಾಯತ್ರಿಯ ಬದುಕು, ಅವಳ ಬವಣೆ, ಅವಳ ಹೋರಾಟಗಳೆಲ್ಲವೂ ಬಂದೇ